# ಪ್ರಕೃತಿಯ ಮಡಿಲಲ್ಲಿ ಪಾಠ



ನಮ್ಮ ಹಳ್ಳಿಗಳಲ್ಲಿ ಕೆಲವೊಂದು ಆಚರಣೆಗಳು ಇಂದಿಗೂ ಕೂಡ ಅನುಕರಣೀಯ. ಹಿಂದೆ ಹಳ್ಳಿಗಳಲ್ಲಿ ನಿಸರ್ಗದ ನಡುವೆ ಪಾಠದ ಜೊತೆಗೆ ಆಟವನ್ನು ಆಡುವುದರ ಮೂಲಕ ಮಕ್ಕಳಲ್ಲಿ ಮನೋವಿಕಾಸದ ಬೆಳವಣಿಗೆಗೆ ಸಹಕಾರಿಯಾಗುವಂತಹ ನಿಟ್ಟಿನಲ್ಲಿ ಕೆಲಸವನ್ನು ಮಾಡುತ್ತಿದ್ದರು. ಈ ಕಾರ್ಯವನ್ನು ಬಿಂಬಿಸುವ ಕಲಾಕೃತಿಗಳು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ಇಡಗುಂಜಿಯ ವಿನಾಯಕ ವನದಲ್ಲಿ ಎಲ್ಲರ ಗಮನ ಸೆಳೆಯುತ್ತಿವೆ.

**- ಬಳಕೂರು ವಿ.ಎಸ್.ನಾಯಕ, ಬೆಂಗಳೂರು**



# ಹಳೆಯ ಪೂಜಾಪೀಠ

ಈ ಚಿತ್ರದಲ್ಲಿರುವ ಚಿತ್ತಾಕರ್ಷಕ ಪೂಜಾಪೀಠವನ್ನು ನಮ್ಮ ವಂಶದ ಪೂರ್ವಿಕರು ದೇವರ ವಿಗ್ರಹಗಳನ್ನಿಟ್ಟು ಪೂಜಿಸಲು ಬಳಸುತ್ತಿದ್ದರು. ನಾಲ್ಕಂಗುಲ ಉದ್ದ ಮತ್ತು ಮೂರಂಗುಲ ಅಗಲವಿರುವ ಆಯತಾಕಾರದ ಹಿತ್ತಾಳೆಯ ಈ ಪುಟ್ಟ ಪೀಠ ಸಿಂಹಾಸನವನ್ನು ಹೋಲುತ್ತದೆ. ನೇಪಥ್ಯದ ನಡುವಿನಲ್ಲಿರುವ ಜಾಲರಿಯಂತಹ ರಚನೆಯ ಮೇಲೆ ಬಳ್ಳಿಗಳು ಹಬ್ಬಿಕೊಂಡಿವೆ. ಲತೆಗಳ ಸಂಗಮ ಸ್ಥಾನದ ಮೇಲೆ ದೇವನಾಗರಿ ಲಿಪಿಯ ಓಂ ಅಕ್ಷರವಿದ್ದು ಅದರ ಎರಡೂ ಬದಿಗಳಲ್ಲಿರುವ ಸುಂದರ ನವಿಲುಗಳು ಬಳ್ಳಿಗಳ ಮೇಲೆ ಕುಳಿತಿವೆ. ಉಳಿದಂತೆ ಮುಂಭಾಗದಲ್ಲಿ ಎರಡು ಮತ್ತು ಎಡಬಲಗಳಲ್ಲಿ ಒಂದೊಂದು ನವಿಲುಗಳಿವೆ. ಓಂ ಅಕ್ಷರದ ಮೇಲೆ ಹಾಗೂ ಪೀಠದ ನಾಲ್ಕೂ ಮೂಲೆಗಳಲ್ಲಿ ಸ್ತಂಭಗೋಪುರಗಳಿವೆ. ಒಟ್ಟಾರೆ ಆರಂಗುಲ ಎತ್ತರವಿರುವ ಈ ಪೂಜಾಪೀಠದ ಪ್ರತಿ ಕಾಲಿನ ಉದ್ದ ಒಂದಂಗುಲದಷ್ಟಿದೆ. ಕಲೆ ಮತ್ತು ಆರಾಧನೆಯ ಸಂಗಮದಂತಿದೆ ಈ ಪೂಜಾಪೀಠ.

**-ಮಂಜುನಾಥ ಡಿ.ಎಸ್., ಬೆಂಗಳೂರು**

# 400 ವರ್ಷಗಳ ಬಾಗಿಲು

ವಿಜಯಪುರದ ಐತಿಹಾಸಿಕ ಸ್ಮಾರಕಗಳಲ್ಲೊಂದಾದ ಅಸರ್ ಮಹಲ್ ತುಂಬಾ ಪ್ರಾಚೀನ ಸ್ಮಾರಕವಾಗಿದೆ. ಇದನ್ನು ಮೊಹಮ್ಮದ್ ಆದಿಲ್ ಶಾಹಿ ನಿರ್ಮಿಸಿದ. ಈ ಸ್ಮಾರಕದ ಬಾಗಿಲಿಗೆ 400 ವರ್ಷಗಳ ಇತಿಹಾಸವಿದೆ. ಇನ್ನೂ ಈ ಬಾಗಿಲು ಹೊಸದಾಗಿ ನಿರ್ಮಿಸಿದಂತಿದೆ. ಈ ಬಾಗಿಲಿಗೆ ಪಂಚ ಲೋಹಗಳನ್ನು ಬಳಸಿ ನಿರ್ಮಿಸಲಾಗಿದೆ. ಕಬ್ಬಿಣದ ಮೊಳೆಗಳು ಹಾರೆ ಗಾತ್ರದಲ್ಲಿವೆ. ಬಾಗಿಲನ್ನು ಅಳವಡಿಸಲಾದ ಸರಪಳಿ 500 ಕೆ.ಜಿ ತೂಕವುಳ್ಳದ್ದಾಗಿದೆ. ಈ ಬಾಗಿಲನ್ನು ಶೀಶಂ ಲಕಡಿ ಮತ್ತು ಸಾಗವಾನಿ ಕಟ್ಟಿಗೆಯಿಂದ ನಿರ್ಮಿಸಲಾಗಿದೆ. ಬಾಗಿಲಿನ ಹೊಸ್ತಿಲು ಒಂದೂವರೆ ಅಡಿ ಎತ್ತರವಾಗಿದೆ. ಇದನ್ನು ದಾಟಲು ಪುಟ್ಟ ಮಕ್ಕಳು ಮತ್ತು ವಯಸ್ಸಾದವರು ಕಷ್ಟಪಡಬೇಕಾಗುತ್ತದೆ. ಇಂತಹದೊಂದು ಕಲಾತ್ಮಕವಾದ ಬಾಗಿಲು ತನ್ನ ಗತ ವೈಭವದ ಇತಿಹಾಸವನ್ನು ಹೇಳಲು ಇನ್ನೂ ಹಲವು ವರ್ಷಗಳ ಕಾಲ ಹಾಳಾಗದೇ ಇರುವಷ್ಟು ಗಟ್ಟಿಮುಟ್ಟಾಗಿದೆ.

**ಚಿತ್ರ- ಬರಹ: ಕಲ್ಪನಾ ಚ.ಮಠಪತಿ, ವಿಜಯಪುರ**

